ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY DEBATES

ಶುಕ್ರವಾರ 21ನೇ ಮಾರ್ಚ್ 1997ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆ ಸಭಾಂಗಣದಲ್ಲಿ

ಬೆಳಿಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ **ರಮೇಶ್ ಕುಮಾರ್**) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೆ ಸಂಖ್ಯೆ : 166 (1385)

ಅಧ್ಯಕ್ಷರು : ಈಗ ಪ್ರಶ್ನೋತ್ತರ, ಶ್ರೀಮತಿ ಬಿ. ಟಿ. ಲಲಿತಾನಾಯಕ್ ಅವರ ಪ್ರಶ್ನೆಯನ್ನು ಅನಂತರ ತೆಗೆದುಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ಕೌನ್ಸಿಲ್‌ನಲ್ಲಿ ಇದ್ದಾರೆ. ಮಂತ್ರಿಗಳಿಗೆ ಹೇಳಿ ಕಳುಹಿಸಿದ್ದಾರೆ. ಈ ಪ್ರಶ್ನೆಯನ್ನು ಇವತ್ತೇ ಅಂತ್ಯದಲ್ಲಿ ತೆಗೆದುಕೊಳ್ಳೋಣ.

ಹನಿ ನೀರಾವರಿಗೆ ಸಬ್ಸಿಡಿ

167 - ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸರ್ಕಾರ ಹನಿ ನೀರಾವರಿಗೆ ಸಬ್ಸಿಡಿ ನೀಡುವ ಉದ್ದೇಶವಿದೆಯೇ?

2) ಹಾಗಿದ್ದಲ್ಲಿ ಸಬ್ಸಿಡಿ ಎಂದಿನಿಂದ ನೀಡಲಾಗುವುದು?

ಶ್ರೀ ಡಿ. ಟಿ ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

1) ಹಾದು.

2) ಕೇಂದ್ರ ಪುರಸತ ಕೃಷಿಯಲ್ಲಿ ಪ್ಲಾಸ್ಟಿಕ್ ಬಳಕೆ ಯೋಜನೆಯನ್ನು 1991-92ರಿಂದ ಪ್ರಾರಂಭಿಸಿದ್ದು 1995-96ರವರೆಗೆ ಶೇಕಡಾ 50ರ ರಿಯಾಯಿತಿ ದರದದಲ್ಲಿ ರೈತರ ತಾಕುಗಳಲ್ಲಿ ಹನಿ ನೀರಾವರಿ ಉಪಕರಣ ಅಳವಡಿಸುವುದಕ್ಕೆ ಸಹಾಯಧನವನ್ನು ಒದಗಿಸಲಾಗಿದೆ. 1996-97ನೇ ಸಾಲಿನಿಂದ ಸಹಾಯಧನದ ಪ್ರಮಾಣವನ್ನು ಎಸ್.ಸಿ. ಮತ್ತು ಎಸ್.ಟಿ. ಸಣ್ಣ ಹಾಗೂ ಅತಿ ಸಣ್ಣ ರೈತರು ಮತ್ತು ಮಹಿಳಾ ಕೃಷಿಕರಿಗೆ ಹನಿ ನೀರಾವರಿ ಉಪಕರಣ ಅಳವಡಿಸಲು ನೀಡಲಾಗುತ್ತಿದೆ.

ಶ್ರೀ ಶಿವಾನಂದ ನಾಯ್ಕ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಶೇಕಡ 60ರಷ್ಟು ರೈತರು ಹನಿ ನೀರಾವರಿಗಿಂತಲೂ ತುಂತುರು ನೀರಾವರಿಗೆ ಸಬ್ಸಿಡಿ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೇ, 50ರ ರಿಯಾಯಿತಿ ದರದಲ್ಲಿ ರೈತರ ಜಮೀನಿನಲ್ಲಿ ಹನಿ ನೀರಾವರಿ ಉಪಕರಣ ಅಳವಡಿಸುವುದಕ್ಕೆ ಸಹಾಯಧನವನ್ನು ಒದಗಿಸಲಾಗಿದೆ. ಅದನ್ನು 1996-97ನೇ ಸಾಲಿನಿಂದ ಸಹಾಯಧನದ ಪ್ರಮಾಣವನ್ನು ಹೆಚ್ಚಿಸಿದ್ದು, 70ರಷ್ಟು ಸಹಾಯಧನವನ್ನು ಜನರಲ್ ಎಂದರೆ ಇತರೆ ವರ್ಗದ ರೈತರಿಗೂ ಹಾಗೂ ಶೇಕಡ 90ರಷ್ಟು ಸಹಾಯಧನವನ್ನು ಎಸ್‌ಸಿ ಮತ್ತು ಎಸ್‌ಟಿ ಮತ್ತು ಮಹಿಳೆಯರಿಗೂ ಕೊಡಲಾಗುತ್ತಿದೆ. ಆದರೆ ಇದನ್ನು ತುಂತುರು ನೀರಾವರಿಗೆ ಕೊಡುವುದಕ್ಕೆ ಅವಕಾಶವಿಲ್ಲ. ನಾವು ಕಾಫಿ, ಟೀ, ರಬ್ಬರ್ ಬಿಟ್ಟು ತೋಟದ ಎಲ್ಲಾ ಬೆಳೆಗಳಿಗೂ ಕೊಡುವ ವ್ಯವಸ್ಥೆ ಇದೆ. ಮಾನ್ಯ ಸದಸ್ಯರು ತುಂತುರು ನೀರಾವರಿಯನ್ನು ಏನು ಕೇಳಿದ್ದಾರೆ ಅದನ್ನು ಪರಿಶೀಲಿಸಿ ಕೊಡುವುದಕ್ಕೆ ನೋಡುತ್ತೇನೆ.

ಅಧ್ಯಕ್ಷರು : ಮಂತ್ರಿಗಳು ಈಗ ಏನು ಯೋಜನೆ ಇದೆ ಅದನ್ನು ಹೇಳಿದ್ದಾರೆ. ತಾವು ಏನು ಹೊಸ ಸಲಹೆ ಕೊಟ್ಟಿದ್ದೀರಿ ಅದನ್ನು ಸರ್ಕಾರದ ಮುಂದೆ ಇಟ್ಟು ಆಲೋಚನೆ ಮಾಡಿ ಒಂದು ನಿರ್ಣಯಕ್ಕೆ ಬಂದು ತಿಳಿಸುತ್ತೇವೆಂದು ಹೇಳಿದ್ದಾರೆ. ಅವರಿಗೆ ಸ್ವಲ್ಪ ಸಮಯವನ್ನು ಕೊಡೋಣ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರ ಪ್ರಶ್ನೆ ಸಂಖ್ಯೆ : 171(1430)ಕ್ಕೆ ಸಮಯವನ್ನು ಕೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಸಂಖ್ಯೆ : 172(1086)ಕ್ಕೆ ಇದಕ್ಕೆ ಮಾನ್ಯ ಹಣಕಾಸಿನ ಸಚಿವರು ಉತ್ತರ ಕೊಡಬೇಕಾಗುತ್ತದೆ. ಉತ್ತರ ಬೇಕು ಎಂದರೆ.....

ಅಧ್ಯಕ್ಷರು : ಬೇಡ ಅವರು ಕೊಡಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎಸ್ಟಾಬ್ಲಿಷ್‌ಮೆಂಟ್ ಆಫ್ ಅಗ್ರಿಕಲ್ಚರ್ ಫೈನಾನ್ಸ್ ಕಾರ್ಪೋರೇಷನ್ ಬಗ್ಗೆ ನನಗೆ ಉತ್ತರ ಬೇಕು ಅಷ್ಟೇ, ಅವರು ಉತ್ತರ ಕೊಡಬೇಕು, ಇವರ ಉತ್ತರ ಕೊಡಬೇಕು ಎಂದು ಇಲ್ಲ.

ಅಧ್ಯಕ್ಷರು : ಸಂಬಂಧಪಟ್ಟ ಮಂತ್ರಿಗಳು ಇಲ್ಲಿದಿದ್ದರೆ ಕಷ್ಟ. Other Ministers cannot give answer to your satisfaction. Before you table, the question is yours. Once it is table, it is the property of the House and the House is entitled to get full answer.

SRI. G.V. SRIRAMAREDDY : It is the joint responsibility of Agriculture Minister and the Finance Minister.

MR. SPEAKER : I will transfer it to the Finance Minister's jurisdiction.ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಜಿ.ವಿ. ಶ್ರೀರಾಂರೆಡ್ಡಿ : ತುಂಬಾ ಸಲ ಈ ರೀತಿಯಾಗಿಬಿಟ್ಟಿದೆ.

MR. SPEAKER : Full answers can be given by the concerned Minister.He can tell about the ramifications, about Agricultural development. ಸೋಮವಾರ ಅವರ ಬಿಸಿನೆಸ್ ಇದೆ, ಅವತ್ತು ಮಾಡಿಸಿಕೊಡುತ್ತೇನೆ.

ಅಧ್ಯಕ್ಷರು : ಪ್ರಶ್ನೆ ಸಂಖ್ಯೆ : 173(1377) ಅನಂತರ ತೆಗೆದುಕೊಳ್ಳೋಣ. ಸಾರಿಗೆ ಮಂತ್ರಿಗಳು ಕೌನ್ಸಿಲ್‌ನಲ್ಲಿ ಇದ್ದಾರೆ.

ಭೂ ನ್ಯಾಯ ಮಂಡಲಿಯಲ್ಲಿನ ಬಾಕಿ ಅರ್ಜಿಗಳು

175 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ನ್ಯಾಯ ಮಂಡಲಿಯಲ್ಲಿ ಇತ್ಯರ್ಥಕ್ಕೆ ಬಾಕಿ ಇರುವಂತಹ ಅರ್ಜಿಗಳು ಎಷ್ಟು? (ಅರ್ಜಿ ನಮೂನೆ 2ಎ ಮತ್ತು 7ರ ಬಗ್ಗೆ ಪ್ರತ್ಯೇಕವಾಗಿ ತಾಲ್ಲೂಕುವಾರು ವಿವರವನ್ನು ನೀಡುವುದು).

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ನ್ಯಾಯ ಮಂಡಳಿಯ ಮುಂದೆ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳು ಈ ಕೆಳಗಿನಂತಿವೆ: (ನಮೂನೆ 2ಎ ಮತ್ತು 7ರಂತೆ).

ತಾಲ್ಲೂಕು	ನಮೂನೆ 2ಎ ಮನೆ ನಿವೇಶನ ಅರ್ಜಿ ಕಲಂ 38		ನಮೂನೆ 7ರ ಅರ್ಜಿ ಕಲಂ 48		ಒಟ್ಟು	
	ಮೂಲ ಅರ್ಜಿ	ಮರು ವಿಚಾರಣೆಗೆ ಬಂದ ಅರ್ಜಿ	ಮೂಲ ಅರ್ಜಿ	ಮರು ವಿಚಾರಣೆಗೆ ಬಂದ ಅರ್ಜಿ	ಮೂಲ ಅರ್ಜಿ	ಮರು ವಿಚಾರಣೆಗೆ ಬಂದ ಅರ್ಜಿ
1	2	3	4	5	6	7
1. ಕುಂದಾಪುರ	-	6	-	351	6	351
2. ಕಾರ್ಕಳ	20	1	2	322	21	324
3. ಉಡುಪಿ	66	24	-	11	90	611
4. ಮಂಗಳೂರು	-	-	3	39	-	42
5. ಬಂಟ್ವಾಳ	172	3	3	436	175	439
6. ಬೆಳ್ತಂಗಡಿ	-	1	-	10	1	10
7. ಪುತ್ತೂರು	-	-	-	6	-	6
8. ಸೂಳ್ಯ	-	-	-	5	-	5
ಒಟ್ಟು	**258**	**35**	**8**	**1780**	**293**	**1788**